ನಂತರ ಕೂಡ ಸರ್ಕಾರ ಈ ಬಗ್ಗೆ ಸ್ಪಂದಿಸುವುದಿಲ್ಲವೆಂದರೆ ಹೇಗೆ? Provision ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತೇವೆಂದು ಹೇಳಿ. ನೀವು ಹಿರಿಯ ಸಚಿವರು ಆಗುವುದಿಲ್ಲವೆಂದರೆ ಹೇಗೆ?

ಶ್ರೀ ಟಿ.ಬಿ.ಜಯಚಂದ್ರ: ನೀವು ಹೇಳಿದ್ದು ನನಗೆ ಅರ್ಥವಾಯಿತು.

ಶ್ರೀ ವಿಶ್ವನಾಥ್ ಈ. ಪಾಟೀಲ್: ಮಹತ್ವವಾದ ಕಾರ್ಯಕ್ರಮ ಇದು. ಹೊಲಗಳಿಗೆ ರಸ್ತೆಯಿಲ್ಲದೆ ನಮ್ಮ ರೈತರು ಕಬ್ಬಿನ ಗಾಡಿಯಿಂದ ಬಿದ್ದು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅದಕ್ಕೋಸ್ಕರ ಆದಷ್ಟು ಬೇಗ ಜಾರಿಯಾಗಬೇಕೆಂಬುದು ನನ್ನ ಒತ್ತಾಯವಾಗಿದ್ದು, ಇದಕ್ಕೆ ಒಂದು provision ಮಾಡಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ: ನಾನು ಈಗಾಗಲೇ ಖಚಿತಪಡಿಸಿದ್ದೇನೆ. ಈ ವಿಚಾರ ಇತ್ಯರ್ಥವಾಗಬೇಕಾದರೆ ಅರ್ಧಗಂಟೆ ಚರ್ಚೆಯಾಗಬೇಕಾಗುತ್ತದೆ.

ಅಧ್ಯಕ್ಷರು: I agree, ಚರ್ಚೆ ಮಾಡೋಣ.

ಕೊಳಗೇರಿ ಪ್ರದೇಶದ ಒತ್ತುವರಿ

20(274), ಶ್ರೀ ಮುನಿರತ್ನ (ರಾಜರಾಜೇಶ್ವರಿನಗರ)

ಅ) ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಿ.ಬಿ.ಎಂ.ಪಿ. ವಾರ್ಡ್ ನಂ.69 ಲಗ್ಗೆರೆ ಮತ್ತು ವಾರ್ಡ್ 42 ಲಕ್ಷ್ಮಿದೇವಿನಗರದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವ್ಯಾಪ್ತಿಯ ಕೊಳಗೇರಿ ಪ್ರದೇಶದ ವಿಸ್ತೀರ್ಣವೆಷ್ಟು; ಅದರ ನಕ್ಷೆಯ ಪ್ರತಿ ಒದಗಿಸುವುದು.

ಆ) ಹಾಲಿ ಈ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸದೇ ಖಾಲಿ ಇರುವ ಪ್ರದೇಶದ ವಿಸ್ತೀರ್ಣವೆಷ್ಟು; (ಮಾಹಿತಿ ನೀಡುವುದು).

ಇ) ಹಾಗಿದ್ದಲ್ಲಿ, ಒತ್ತುವರಿ ತೆರವುಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು;

ಈ) ಈ ಪ್ರದೇಶದಲ್ಲಿ ಒತ್ತುವರಿಯನ್ನು ತಡೆಯುವ ನಿಟ್ಟಿನಲ್ಲಿ ಈಗಾಗಲೇ ಕೊಳಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ಸರ್ವೆ ಕಾರ್ಯ ಕೈಗೊಳ್ಳಲಾಗಿದ್ದಲ್ಲಿ, ಕೊಳಗೇರಿ ಪ್ರದೇಶದ ಗಡಿ ಗುರುತಿಸಿ, ಬೇಲಿ ಅಥವಾ ಕಾಂಪೌಂಡ್ ನಿರ್ಮಿಸಲು ಸರ್ಕಾರಕ್ಕಿರುವ ತೊಡಕುಗಳೇನು?

ಡಾ. ಹೆಚ್.ಎಂ. ಅಂಬರೀಷ್(ವಸತಿ ಸಚಿವರು)

ಅ) ರಾಜರಾಜೇಶ್ವರಿನಗರದ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.69 ಲಗ್ಗೆರೆ ಮತ್ತು ವಾರ್ಡ್ 42 ಲಕ್ಷ್ಮಿದೇವಿನಗರದಲ್ಲಿ ಮಂಡಳಿಗೆ ಮಂಜೂರಾದ ಜಮೀನಿನ ವಿಸ್ತೀರ್ಣ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಹೋಬಳಿ	ಸರ್ವೆ ನಂ.	ವಿಸ್ತೀರ್ಣ (ಎ–ಗು)
1	ಬೆಂ.ಉತ್ತರ	ಯಶವಂತಪುರ	8/1	2–26
2	ಬೆಂ.ಉತ್ತರ	ಯಶವಂತಪುರ	9/1	17–08
3	ಬೆಂ.ಉತ್ತರ	ಯಶವಂತಪುರ	9/2	15–27
4	ಬೆಂ.ಉತ್ತರ	ಯಶವಂತಪುರ	11	35–05
5	ಬೆಂ.ಉತ್ತರ	ಯಶವಂತಪುರ	12	24–23
			ಒಟ್ಟು	**95–09**

ನಕ್ಷೆ ಅನುಬಂಧ–ಅ ಲಗತ್ತಿಸಿದೆ.

ಹಸ್ತಾಂತರದ ಸಮಯದಲ್ಲಿ ವಾಸ್ತವವಾಗಿ 71–02 ಎಕರೆ ಪ್ರದೇಶವನ್ನು ಪಡೆಯಲಾಗಿದೆ.

ಆ) ಹಾಲಿ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸದೇ ಖಾಲಿ ಇರುವ ಪ್ರದೇಶದ ವಿಸ್ತೀರ್ಣ ಸುಮಾರು 3 ಎಕರೆಯಷ್ಟಿರುತ್ತದೆ. ಈ ಬಗ್ಗೆ

ನ್ಯಾಯಾಲಯದ ನಿರ್ದೇಶನದಂತೆ ಜಂಟಿ ಸರ್ವೆ ಕಾರ್ಯ ಮಾಡಲು ಕ್ರಮ ಕೈಗೊಂಡಿದೆ.

ಇ) ಒತ್ತುವರಿ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಒಟ್ಟು 26 ಮೊಕದ್ದಮೆಗಳನ್ನು ಒತ್ತುವರಿದಾರರು ದಾಖಲಿಸಿರುತ್ತಾರೆ.

ಮೂಲದಾವೆಗಳು	8	ಈ ಪೈಕಿ 4 ಮೂಲದಾವೆಗಳು ಮತ್ತು ಒಂದು ರಿಟ್ ಅರ್ಜಿ ಇತ್ಯರ್ಥವಾಗಿರುತ್ತದೆ.
ರಿಟ್ ಅರ್ಜಿಗಳು	7	
ಆರ್.ಎಫ್.ಎ.ಗಳು	6	
ಎಕ್ಸಿಕ್ಯೂಷನ್ ಪಿಟೀಶನ್‌ಗಳು	2	
ರಿಟ್ ಅಪೀಲುಗಳು	2	
ಇತರೆ ದಾವೆ	1	

ಆರ್.ಎಫ್.ಎ.ಸಂಖ್ಯೆ–417/2012ರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ನಿರ್ದೇಶನದಂತೆ ಸಂಬಂಧಪಟ್ಟ ಇಲಾಖೆಗಳು ಮತ್ತು ಮಂಡಳಿಯವತಿಯಿಂದ ಜಂಟಿ ಸರ್ವೆ ಕಾರ್ಯ ನಡೆಸಲು ಕ್ರಮ ಕೈಗೊಂಡಿದೆ. ಸದರಿ ಜಂಟಿ ಸರ್ವೆ ವರದಿ ಬಂದ ನಂತರ ಇದನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ನ್ಯಾಯಾಲಯದ ತೀರ್ಪು ಬಂದ ನಂತರ ಮಂಡಳಿಗೆ ಹಸ್ತಾಂತರಿಸಲಾದ ಜಮೀನನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಘನ ನ್ಯಾಯಾಲಯದ ನಿರ್ದೇಶನದಂತೆ ವಿವಿಧ ಇಲಾಖೆಗಳನ್ನೊಳಗೊಂಡಂತೆ ಜಂಟಿ ಸರ್ವೆ ಕಾರ್ಯ ಮಾಡಲಾಗುತ್ತಿದೆ. ಸರ್ವೆ ವರದಿ ಬಂದ ನಂತರ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಘನ ನ್ಯಾಯಾಲಯದ ತೀರ್ಪು ಬಂದ ನಂತರ ನ್ಯಾಯಾಲಯದ ಆದೇಶದಂತೆ, ಬೇಲಿ ಹಾಕಿ ಮಂಡಳಿಯ ಆಸ್ತಿಯನ್ನು ಸಂರಕ್ಷಿಸಲಾಗುವುದು.


VILLAGE
S NO. 6
BOUNDRIES
NORTH :- S. NO 150 AT LAGGERE
SOUTH :- S NO 9/e OF LAGGERE
EAST :- RETAINED TO DECLARENT
WEST :- S NO 8 OF LAGGERE
TO BE ACQUIRED 70,541.48 SQ MTS
DECLARENT LAND




HOBLI :- YESWANTHAPURA.. BANGALORE NORTH TALUK
S.NO 150
S.NO 9/1
S NO 9/2
S NO 10
JARAKABANDE KAVAL
SCALE - 1
Boundary stone
(VENKATESHAIAH

ಶ್ರೀ ಮುನಿರತ್ನ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರ ಸರಿಯಿದೆ.

ಶ್ರೀ ಸಿ.ಟಿ.ರವಿ: ಅವರವೆಲ್ಲಾ star ಆಗುತ್ತವೆ.

ಅಧ್ಯಕ್ಷರು: ಪ್ರಶ್ನೆ ಕೇಳಿದವರು ಅವರು, ಅವರಿಗೆ ಉತ್ತರ ಸರಿಯಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ರವಿಯರೆ, ವಸತಿ ಸಚಿವರು star ಆಗಿದ್ದಾರೆ ಅದಕ್ಕೆ star ಆಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಅಂಬರೀಷ್ ಮತ್ತು ಮುನಿರತ್ನ ನಡುವೆ ಏನೋ match fixing ಆಗಿದೆ.

ಅಧ್ಯಕ್ಷರು: ನಾರಾಯಣಗೌಡ ರವರು ಸದನದಲ್ಲಿ ಹಾಜರಿಲ್ಲ. ಡಿ.ಎನ್.ಜೀವರಾಜ್ ರವರೆ ಪ್ರಶ್ನೆ ಕೇಳಿ.

ಅನುದಾನ ಬದಲಾವಣೆ

22(974), ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ)

ಅ) ಶೃಂಗೇರಿ ವಿಧಾನ ಸಭಾ ಕ್ಷೇತ್ರಕ್ಕೆ ಚಿಕ್ಕಮಗಳೂರು ಜಿಲ್ಲಾ ಪಂಚಾಯ್ತಿಯ ವತಿಯಿಂದ 3054 ಲೆಕ್ಕಶೀರ್ಷಿಕೆಯಲ್ಲಿ 2013–14ನೇ ಸಾಲಿಗೆ ಬಿಡುಗಡೆಯಾದ ಹಣವೆಷ್ಟು?

ಆ) ಈ ಹಣವನ್ನು 5054 ಶೀರ್ಷಿಕೆಗೆ ಬದಲಾವಣೆ ಮಾಡಿದ್ದು ನಿಜವೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಇಂತಹ ಬದಲಾವಣೆ ಮಾಡುವ ಹಕ್ಕು ಅಧಿಕಾರಿಗಳಿಗಿದೆಯೇ; ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗುವುದು; ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಜರುಗಿಸಿದೆಯೇ; ಈ ಬಗ್ಗೆ ಜಿಲ್ಲಾ ಪಂಚಾಯ್ತಿಯು ನಿರ್ಣಯ ಕೈಗೊಂಡಿದೆಯೇ (ವಿವರ ಒದಗಿಸುವುದು);